# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

**ದಿನಾಂಕ: 24.08.2020 ರಂದು ಬೆಳಗ್ಗೆ 11:00 ಗಂಟೆಗೆ ವಿಶ್ವವಿದ್ಯಾನಿಲಯದ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮನಕೂರು ಇಲ್ಲಿದ ನಡೆದ 2020–21ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಸಿದ್ದೇಗೌಡ ವೈ.ಎಸ್., ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಪುರುಷೋತ್ತಮ ರಾವ್ ಸಿಂಧ್ಯ | ಸದಸ್ಯರು |
| 3. | ಶ್ರೀ ನಾರಾಯಣ ಎಂ. | ಸದಸ್ಯರು |
| 4. | ಪ್ರೊ. ಶಿವಾನಂದಯ್ಯ ಎನ್.ಪಿ.,<br>ಪ್ರಾಂಶುಪಾಲರು, ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ, ತುರುವೇಕೆರೆ ತಾಲ್ಲೂಕು. | ಸದಸ್ಯರು |
| 5. | ಪ್ರೊ. ಡಿ.ಎಸ್. ಮುನಿಂದ್ರಕುಮಾರ್,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ. | ಸದಸ್ಯರು |
| 6. | ಡಾ. ಬಾಲಪ್ಪ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ. | ಸದಸ್ಯರು |
| 7. | ಡಾ. ಪಿ. ರಾಜಾರೆಡ್ಡಿ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು. | ಸದಸ್ಯರು |
| 8. | ಪ್ರೊ. ಜಗದೀಶ್ ಕೆ.ಎಸ್.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು–572101. | ಸದಸ್ಯರು |
| 9. | ಡಾ. ಎ.ಎಂ. ಶಿವಣ್ಣ,<br>ಪ್ರಾಂಶುಪಾಲರು, ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ಎನ್.ಹೆಚ್.206, ಬಿ.ಹೆಚ್.ರಸ್ತೆ, ತಿಪಟೂರು–572201 | ಸದಸ್ಯರು |
| 10. | ಪ್ರೊ. ಹೆಚ್.ಎಸ್. ಶಿವಯೋಗಿ,<br>ಪ್ರಾಂಶುಪಾಲರು, ನವೋದಯ ಪ್ರಥಮ ದರ್ಜೆ ಕಾಲೇಜು, ಶೆಟ್ಟಿಕೆರೆ ರಸ್ತೆ, ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ–572214 | ಸದಸ್ಯರು |
| 11. | ಡಾ. ಟಿ. ವೆಂಕಟಾಚಲಯ್ಯ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ, ತುಮಕೂರು ಜಿಲ್ಲೆ–572216 | ಸದಸ್ಯರು |
| 12. | ಪ್ರೊ. ಎಲ್.ಪಿ. ರಾಜು., ಪ್ರಾಧ್ಯಾಪಕರು | ಸದಸ್ಯರು |
| 13. | ಡಾ. ಪಾಟೀಲ್ ಮಲ್ಲಿಕಾರ್ಜುನ ಬಿ., ಪ್ರಾಧ್ಯಾಪಕರು | ಸದಸ್ಯರು |
| 14. | ಪ್ರೊ. ಬಸವರಾಜ ಜಿ., ಪ್ರಾಧ್ಯಾಪಕರು | ಸದಸ್ಯರು |
| 15. | ಪ್ರೊ. ವಿಲಾಸ್ ಎಂ., ಕಡ್ರೊಲ್ಕರ್, ಪ್ರಾಧ್ಯಾಪಕರು | ಸದಸ್ಯರು |

| | | |
|---|---|---|
| 16. | ಪ್ರೊ. ಮೀನಾಕ್ಷಿ ಖಂಡೀಮಠ್, ಪ್ರಾಧ್ಯಾಪಕರು | ಸದಸ್ಯರು |
| 17. | ಡೀನರು, ಕಲಾ ನಿಕಾಯ | ಸದಸ್ಯರು |
| 18. | ಡೀನರು, ಕಾನೂನು ನಿಕಾಯ | ಸದಸ್ಯರು |
| 19. | ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 20. | ಡೀನರು, ವಾಣಿಜ್ಯ ಮತ್ತು ವ್ಯವಹಾರ ನಿಕಾಯ | ಸದಸ್ಯರು |
| 21. | ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 22. | ಪ್ರೊ. ಪಿ. ಪರಮಶಿವಯ್ಯ<br>ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 23. | ಡಾ. ಕೇಶವ<br>ಯೋಜನೆ, ಮೇಲ್ವಿಚಾರಣೆಯ ಸಮಿತಿಯ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 24. | ಡಾ. ಬಿ.ಟಿ. ಸಂಪತ್ ಕುಮಾರ್., ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ | ಸದಸ್ಯರು |
| 25. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 26. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 27. | ಪ್ರೊ. ಕೆ. ನರಹರಿ, ನಿವೃತ್ತ ಪ್ರಾಧ್ಯಾಪಕರು, ಬಿ.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು | ಸರ್ಕಾರದಿಂದ ವಿಶೇಷ ಆಹ್ವಾನಿತರು |

## ಹಾಜರಾಗದ ಸದಸ್ಯರು

| | | |
|---|---|---|
| 1. | ಶ್ರೀ ಅ. ದೇವೇಗೌಡ, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 2. | ಶ್ರೀ ಕೆ. ಗೋವಿಂದರಾಜ್, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 3. | ಶ್ರೀ ನರಸಿಂಹಮೂರ್ತಿ ಸಿ.ಎನ್. | ಸದಸ್ಯರು |
| 4. | ಡಾ. ಆನಂದ ಕುಮಾರಿ, ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು | ಸದಸ್ಯರು |
| 5. | ಡಾ. ರಂಗಪ್ಪ ಎಸ್.ಟಿ. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಶಿರಾ, ತುಮಕೂರು ಜಿಲ್ಲೆ-572137 | ಸದಸ್ಯರು |
| 6. | ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಅಥವಾ ಅವರ ಪ್ರತಿನಿಧಿ<br>ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 7. | ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ:24.08.2020 ಸೋಮವಾರ ಬೆಳಗ್ಗೆ 11:00 ಕ್ಕೆ ನಡೆದ 2020-21ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ಮಾನ್ಯ ಕುಲಪತಿಗಳು ಕೋವಿಡ್-2019 ರ ಸಮಸ್ಯೆಯಿಂದ ಪ್ರಸ್ತುತ ಆರ್ಥಿಕ ರಂಗಕ್ಕಿಂತ ಶೈಕ್ಷಣಿಕ ರಂಗಕ್ಕೆ ಬಹಳ ಪೆಟ್ಟು ನೀಡುತ್ತಿದೆ ಎಂದು ತಿಳಿಸಿದರು. ಹೊಸ ಶಿಕ್ಷಣ ನೀತಿಯ ಪ್ರಾಮುಖ್ಯತೆಯ ಬಗ್ಗೆ ಮತ್ತು ಯು.ಜಿ.ಸಿ. ಪ್ರಕಾರ ಸೆಪ್ಟೆಂಬರ್ 1 ರಿಂದ 30 ರವರೆಗೆ ಆನ್‌ಲೈನ್ ತರಗತಿಗಳನ್ನು ನಂತರ ಯಥಾವತ್ತಾಗಿ ತರಗತಿಗಳನ್ನು ನಡೆಸಲು ಯು.ಜಿ.ಸಿ. ಚಿಂತಿಸಿದೆ ಎಂಬ ಅಂಶವನ್ನು ಸಭೆಗೆ ಮಾನ್ಯ ಕುಲಪತಿಗಳು ವಿವರಿಸಿದರು. ನಂತರ ಕುಲಸಚಿವರು ಹೊಸದಾಗಿ ವಿದ್ಯಾವಿಷಯಕ ಪರಿಷತ್‌ಗೆ ನೇಮಕಗೊಂಡಿರುವ ಪ್ರಾಂಶುಪಾಲರುಗಳನ್ನು ಪರಿಚಯಿಸಿ, ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ. ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ದಿನಾಂಕ: 19.05.2020 ರಂದು ನಡೆದ ತೃತೀಯ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳನ್ನು ಯತಾವತ್ತಾಗಿ ದೃಢೀಕರಿಸಲಾಯಿತು. | | | |
| ಶೈಕ್ಷಣಿಕ ವಿಭಾಗ | | | |
| 01 | 2020-21.ಸಾ.ವಿ.ವಿ.ಪ.01<br>ಶೈ.ವಿಭಾಗ-01 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 02 | 2020-21.ಸಾ.ವಿ.ವಿ.ಪ.01<br>ಶೈ.ವಿಭಾಗ-02 | ಎಂ.ಕಾಂ. (ಮಾಹಿತಿ ವ್ಯವಸ್ಥೆ) ಕೋರ್ಸ್‌ನ 2, 3 ಮತ್ತು 4ನೇ ಸೆಮಿಸ್ಟರ್‌ನ ಪಠ್ಯಕ್ರಮದಲ್ಲಿನ ಕೋರ್ಸ್ ರಚನೆ ಪರಿಷ್ಕರಣೆ ಕುರಿತು. | ಎಂ.ಕಾಂ. (ಮಾಹಿತಿ ವ್ಯವಸ್ಥೆ) ಕೋರ್ಸ್‌ನ 2, 3 ಮತ್ತು 4ನೇ ಸೆಮಿಸ್ಟರ್‌ನ ಪಠ್ಯಕ್ರಮದಲ್ಲಿನ ಕೋರ್ಸ್ ರಚನೆ ಪರಿಷ್ಕರಣೆ ಕುರಿತು ಸಭೆಯು ಪ್ರಸ್ತುತ ವಿನ್ಯಾಸವಿರುವ ಆಂತರಿಕ 50= ಆಂತರಿಕ ಅಂಕ 15 = ಪ್ರಾಯೋಗಿಕ ಪರೀಕ್ಷೆ 35 ರ ಬದಲಾಗಿ 50 = 10 + 40 (10 = ಆಂತರಿಕ ಅಂಕ, 40 = ಪ್ರಾಯೋಗಿಕ ಪರೀಕ್ಷೆ = ಒಟ್ಟು 50) ರಂತೆ ಹಾಗೂ ಅಂಕಪಟ್ಟಿಯಲ್ಲಿ ವಿಭಜನೆ ಮಾಡಿ ನಮೂದಿಸುವ ಬದಲು ಒಟ್ಟಾರೆ 50 ಅಂಕಗಳನ್ನು ನಮೂದಿಸುವಂತೆ ಪಠ್ಯಕ್ರಮದಲ್ಲಿನ ಕೋರ್ಸ್ ರಚನೆ ಪರಿಷ್ಕರಣೆಯನ್ನು ಅಧ್ಯಯನ ಮಂಡಳಿ ಶಿಫಾರಸ್ಸಿನಂತೆ ತಿದ್ದುಪಡಿ ಮಾಡಲು ವಿದ್ಯಾವಿಷಯಕ ಪರಿಷತ್ ಸಭೆಯು ನಿರ್ಣಯಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 03 | 2020-21.ಸಾ.ವಿ.ವಿ.ಪ.01<br>ಶೈ.ವಿಭಾಗ-03 | ಸ್ನಾತಕೋತ್ತರ ಎಂ.ಬಿ.ಎ. ಮತ್ತು ಎಂ.ಸಿ.ಎ. ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ಸ್ನಾತಕೋತ್ತರ ಎಂ.ಬಿ.ಎ. ಮತ್ತು ಎಂ.ಸಿ.ಎ. ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯು ಯಥಾವತ್ತಾಗಿ ಸ್ಥಿರೀಕರಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 04 | 2020-21.ಸಾ.ವಿ.ವಿ.ಪ.01<br>ಶೈ.ವಿಭಾಗ-04 | ತುಮಕೂರು ವಿಶ್ವವಿದ್ಯಾನಿಲಯದ ಕೇಂದ್ರಸ್ಥಾನ, ತಿಪಟೂರು ಮತ್ತು ಶಿರಾ ಕೇಂದ್ರಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ಕೇಂದ್ರಸ್ಥಾನ, ತಿಪಟೂರು ಮತ್ತು ಶಿರಾ ಕೇಂದ್ರಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು (ತಿಪಟೂರುನಲ್ಲಿ ಎಂ.ಎಸ್ಸಿ. ಮೈಕ್ರೊಬೈಯಾಲಜಿ, ಎಂ.ಸಿ.ಎ. ಹಾಗೂ ಪಿ.ಜಿ. ಡಿಪ್ಲೊಮಾ ಇನ್ ಕೋಕೋನಟ್ ಪ್ಲಾಂಟೇಷನ್ ಕೋರ್ಸ್) (ಶಿರಾದಲ್ಲಿ ಎಂ.ಬಿ.ಎ. ಎಂ.ಎ. ಅರ್ಥಶಾಸ್ತ್ರ ಹಾಗೂ ಎಂ.ಎ. ಶಿಕ್ಷಣ) (ತುಮಕೂರು ವಿಶ್ವವಿದ್ಯಾನಿಲಯದ ಕೇಂದ್ರದಲ್ಲಿ ಎಂ.ಎ. ಸಂಸ್ಕೃತ ಮತ್ತು ಎಂ.ಎ. ಹಿಂದಿ) ಪ್ರಾರಂಭಿಸುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯು ಸುಧೀರ್ಘವಾಗಿ ಚರ್ಚಿಸಿ, 10 ವಿದ್ಯಾರ್ಥಿಗಳಿಗಿಂತ ಪ್ರವೇಶಾತಿ ಕಡಿಮೆ ಇದ್ದರೆ ಅಂತಹ ಕೋರ್ಸ್‌ಗಳನ್ನು ಪ್ರಾರಂಭಿಸುವುದು ಸೂಕ್ತವಲ್ಲವೆಂದು ಸಭೆಯು ನಿರ್ಣಯಿಸಿತು. ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| ಕಾಲೇಜು ಅಭಿವೃದ್ಧಿ ಪರಿಷತ್ | | | |
|---|---|---|---|
| 05 | 2020-21.ಸಾ.ವಿ.ವಿ.ಪ.01<br>ಕಾ.ಅ.ಪ.-01 | 2020-21ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಮುಂದುವರಿಕೆ/ಸ್ನಾತಕ ಪದವಿಯ ಪ್ರವೇಶಮಿತಿ ಹೆಚ್ಚಳದ ವರದಿಗಳ ಕುರಿತು | **ಸಂಯೋಜನೆ ನವೀಕರಣದ ನಿರ್ಣಯ:**<br>ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳ ಸಂಯೋಜನೆ ಕುರಿತು ಕ್ರಮ ಸಂಖ್ಯೆ 01 ರಿಂದ 69 ವರೆಗೆ (ಅನುಬಂಧ-1) ಸೂಚಿಸಿರುವ ಕಾಲೇಜುಗಳಿಗೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣಾ ಸಮಿತಿಗಳು ಸಲ್ಲಿಸಿರುವ ವರದಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಅನುಬಂಧ -1 ರಲ್ಲಿ ತಿಳಿಸಿರುವ ಸಮಿತಿಯು ಶಿಫಾರಸ್ಸುಗಳನ್ನು ಅನುಮೋದಿಸಿತು ಹಾಗೂ ಸಂಯೋಜನೆ ನವೀಕರಣಕ್ಕೆ ಶಿಫಾರಸ್ಸು ಮಾಡಿರುವ ಕಾಲೇಜುಗಳಿಗೆ ಸದರಿ ಸಮಿತಿಗಳು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020-21ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಮುಂದುವರಿಕೆಯನ್ನು ಮಂಜೂರು ಮಾಡಬಹುದೆಂದು ಹಾಗೂ<br>ಅನುಬಂಧ-1 ರಲ್ಲಿರುವ ಕ್ರಮ ಸಂಖ್ಯೆ 8 ರ ಹೋಲಿ ಟ್ರಿನಿಟಿ ಕಾಲೇಜು, ಕುಣಿಗಲ್ ತುಮಕೂರು ಜಿಲ್ಲೆ ಈ ಕಾಲೇಜಿನ MSW ಕೋರ್ಸಿಗೆ 2020-21ನೇ ಶೈಕ್ಷಣಿಕ ಸಾಲಿನ ಸಂಯೋಜನೆ ನವೀಕರಣಕ್ಕೆ ಸ್ಥಳೀಯ ವಿಚಾರಣಾ ಸಮಿತಿಯು ಶಿಫಾರಸ್ಸು ಮಾಡಿರುವುದಿಲ್ಲವೆಂಬ ವರದಿಯನ್ನು ಗಮನಿಸಿ ಅನುಮೋದಿಸಿದ ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br>**ಸ್ನಾತಕ ಪದವಿ ಪ್ರವೇಶಮಿತಿ ಹೆಚ್ಚಳದ ನಿರ್ಣಯ:**<br>ತುಮಕೂರಿನ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020-21ನೇ ಶೈಕ್ಷಣಿಕ ಸಾಲಿಗೆ B.C.A ಕೋರ್ಸಿಗೆ 10 ಸೀಟುಗಳನ್ನು, B.Sc-CBZ ಕೋರ್ಸಿಗೆ 10 ಸೀಟುಗಳ ಹೆಚ್ಚುವರಿ ಪ್ರವೇಶಮಿತಿ ಹೆಚ್ಚಳ ಸಂಯೋಜನೆ ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br>ತುಮಕೂರಿನ ಅನನ್ಯ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ. ಷರತ್ತಿಗೊಳಪಟ್ಟು 2020-21ನೇ ಶೈಕ್ಷಣಿಕ ಸಾಲಿಗೆ B.Com ಕೋರ್ಸಿಗೆ 50 ಸೀಟುಗಳ ಹೆಚ್ಚುವರಿ ಪ್ರವೇಶಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br>ತುಮಕೂರಿನ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು |

ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿಗೆ B.C.A ಕೋರ್ಸಿಗೆ 20, B.Sc-PCM ಕೋರ್ಸಿಗೆ 50 ಸೀಟುಗಳ ಹೆಚ್ಚುವರಿ ಪ್ರವೇಶಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.

ತುಮಕೂರಿನ ಶೇಷಾದ್ರಿಪುರಂ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿಗೆ B.Com ಕೋರ್ಸಿಗೆ 60 ಸೀಟುಗಳ ಹೆಚ್ಚುವರಿ ಪ್ರವೇಶ ಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.

ತುಮಕೂರಿನ ವಿದ್ಯಾವಾಹಿನಿ ಪ್ರಥಮ ದರ್ಜೆ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿಗೆ B.C.A ಕೋರ್ಸಿಗೆ 60 ಸೀಟುಗಳ ಹೆಚ್ಚುವರಿ ಪ್ರವೇಶಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.

ತುರುವೇಕೆರೆಯ ಗ್ಲೋಬಲ್ ಎಂಬಸ್ಸಿ ಪ್ರಥಮ ದರ್ಜೆ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ 2020–21ನೇ ಶೈಕ್ಷಣಿಕ ಸಾಲಿಗೆ B.Com ಕೋರ್ಸಿಗೆ 10 ಹೆಚ್ಚುವರಿ ಸೀಟುಗಳಿಗೆ ಶಿಫಾರಸ್ಸು ಮಾಡಿರುವುದಿಲ್ಲವೆಂಬ ವರದಿಯನ್ನು ಗಮನಿಸಿ ಅನುಮೋದಿಸಿದ ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.

<u>ವ್ಯಾಸಂಗ ಕ್ರಮದ ಮುಚ್ಚುವಿಕೆ</u>

ಅಕ್ಷಯ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನವರು 2020–21ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಸ್ತಾವನೆಯಲ್ಲಿ ಬಿ.ಬಿ.ಎಂ ಪದವಿ ವ್ಯಾಸಂಗ ಕ್ರಮವನ್ನು ಮುಚ್ಚುವ ಸಂಬಂಧ ಮನವಿ ಸಲ್ಲಿಸಿದ್ದು, ಈ ಸಂಬಂಧ ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಕಾಲೇಜಿನ ಬಿ.ಬಿ.ಎಂ ಪದವಿಯ ವ್ಯಾಸಂಗ ಕ್ರಮವನ್ನು 2020–21ನೇ ಶೈಕ್ಷಣಿಕ ಸಾಲಿನಿಂದ ಸಂಪೂರ್ಣವಾಗಿ ಮುಚ್ಚಲು ಅನುಮೋದಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 65ರ ಉಪಪ್ರಕರಣ (3)ರನುಸಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.

| | | | |
|---|---|---|---|
| | | - | ಹೇಮಾದ್ರಿ ಸ್ನಾತಕೋತ್ತರ ಕೇಂದ್ರ, ತುಮಕೂರು ಈ ಕಾಲೇಜಿನವರು 2020-21ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಸ್ತಾವನೆಯಲ್ಲಿ ಎಂ.ಎ-ಅರ್ಥಶಾಸ್ತ್ರ ಪದವಿ ವ್ಯಾಸಂಗ ಕ್ರಮವನ್ನು ಮುಚ್ಚುವ ಸಂಬಂಧ ಮನವಿ ಸಲ್ಲಿಸಿದ್ದು, ಈ ಸಂಬಂಧ ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಕಾಲೇಜಿನ ಎಂ.ಎ. ಅರ್ಥಶಾಸ್ತ್ರ ಪದವಿಯ ವ್ಯಾಸಂಗ ಕ್ರಮವನ್ನು 2020-21ನೇ ಶೈಕ್ಷಣಿಕ ಸಾಲಿನಿಂದ ಸಂಪೂರ್ಣವಾಗಿ ಮುಚ್ಚಲು ಅನುಮೋದಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 65ರ ಉಪಪ್ರಕರಣ (3)ರನುಸಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 06 | 2020-21.ಸಾ.ವಿ.ವಿ.ಪ.01<br>ಕಾ.ಅ.ಪ.-02 | 2020-21ನೇ ಶೈಕ್ಷಣಿಕ ಸಾಲಿನ ಬಿ.ಇಡಿ ಮತ್ತು ಬಿ.ಪಿ.ಇಡಿ. ಶಿಕ್ಷಣ ಮಹಾವಿದ್ಯಾಲಯಗಳ ಸಂಯೋಜನೆ ಮುಂದುವರಿಕೆಯ ವರದಿಗಳ ಕುರಿತು | ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ಬಿ.ಇಡಿ ಮತ್ತು ಬಿ.ಪಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳ ಕುರಿತು ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಅನುಬಂಧ-1 ರಲ್ಲಿ ಕ್ರಮ ಸಂಖ್ಯೆ 01 ಮತ್ತು 03 ರಿಂದ 15ರ ವರೆಗೆ ಸೂಚಿಸಿರುವ ಕಾಲೇಜುಗಳಿಗೆ ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020-21ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಮುಂದುವರಿಕೆಯನ್ನು ಮಂಜೂರು ಮಾಡಬಹುದೆಂದು ಹಾಗೂ<br><br>ಅನುಬಂಧ-1 ರಲ್ಲಿರುವ ಕ್ರಮ ಸಂಖ್ಯೆ 2 ರ ನಯಾಲ ಶಿಕ್ಷಣ ಮಹಾವಿದ್ಯಾಲಯ, ತುಮಕೂರು ಈ ಕಾಲೇಜು ಎನ್.ಸಿ.ಟಿ.ಇ ಮತ್ತು ವಿಶ್ವವಿದ್ಯಾನಿಲಯದಿಂದ ಅನುಮೋದನೆಯಾಗಿರುವ ಸ್ಥಳದಲ್ಲಿ ಕಾಲೇಜು ಇರದ ಕಾರಣ B.Ed ಕೋರ್ಸಿಗೆ 2020-21ನೇ ಶೈಕ್ಷಣಿಕ ಸಾಲಿನ ಸಂಯೋಜನೆ ನವೀಕರಣಕ್ಕೆ ಸ್ಥಳೀಯ ವಿಚಾರಣಾ ಸಮಿತಿಯು ಶಿಫಾರಸ್ಸು ಮಾಡಿರುವುದಿಲ್ಲವೆಂಬ ವರದಿಯನ್ನು ಗಮನಿಸಿ ಅನುಮೋದಿಸಿದ ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 07 | 2020-21.ಸಾ.ವಿ.ವಿ.ಪ.01<br>ಕಾ.ಅ.ಪ.-03 | 2020-21ನೇ ಶೈಕ್ಷಣಿಕ ಸಾಲಿನ ಹೊಸ ಕಾಲೇಜು ಸಂಯೋಜನೆ/ ಸಂಯೋಜನೆ ವಿಸ್ತರಣೆಗೆ (ಹೊಸ ಕೋರ್ಸ್) ಸಂಬಂಧಿಸಿದ ವರದಿಗಳ ಕುರಿತು. | <u>ಹೊಸ ಕಾಲೇಜು ನಿರ್ಣಯ:</u><br>ಭಾರತಿ ಎಜುಕೇಷನ್ ಟ್ರಸ್ಟ್ (ರಿ), ತುಮಕೂರು ಇವರ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಿರುವ ಭಾರತಿ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, 2020-21ನೇ ಶೈಕ್ಷಣಿಕ ಸಾಲಿನಿಂದ B.-A-HEP (History, Economics, Political Science) ಕೋರ್ಸಿಗೆ ಶಿಫಾರಸ್ಸು ಮಾಡಿರುವುದಿಲ್ಲವೆಂಬ ವರದಿಯನ್ನು ಗಮನಿಸಿ ಅನುಮೋದಿಸಿದ ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಗ್ಲೋಬಲ್ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್, ತುಮಕೂರು ಇವರ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಿರುವ ಗ್ಲೋಬಲ್ ಶಾಹಿನ್ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು |

| | | | |
|---|---|---|---|
| | | | ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.Sc-CBZ (Chemistry, Botany, Zoology) ಕೋರ್ಸಿಗೆ 50 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಹೊಸ ಸಂಯೋಜನೆ ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಶ್ರೀ ರಾಗಲಹಳ್ಳಿ ಅಕ್ಕಮ್ಮಾಜಿರ ಮುದ್ದಣ ಸ್ಮಾರಕ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್ (ರಿ), ಶಿರಾ ಇವರ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಿರುವ ಆರ್ ಮುದ್ದರಂಗೇಗೌಡ ಪ್ರಥಮ ದರ್ಜೆ ಕಾಲೇಜು, ಶಿರಾ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.A-HPPsy (History, Political Science, Psychology) ಕೋರ್ಸಿಗೆ 100 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಹೊಸ ಸಂಯೋಜನೆ ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಹೆಚ್.ಎಂ.ಎಸ್ ಎಜುಕೇಷನ್ ಸೊಸೈಟಿ (ರಿ), ತುಮಕೂರು ಇವರ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಿರುವ ಹೆಚ್.ಎಂ.ಎಸ್ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.A-HEEng (History, Economics, Optional English) ಕೋರ್ಸಿಗೆ 60 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಹೊಸ ಸಂಯೋಜನೆ ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಶ್ರೀ ಜಗನ್ನಾಥ ಎಜುಕೇಷನ್ ಟ್ರಸ್ಟ್ (ರಿ), ತುಮಕೂರು ಇವರ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಿರುವ ಶ್ರೀ ರಾಘವೇಂದ್ರ ಪ್ರಥಮ ದರ್ಜೆ ಸಂಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.Com ಕೋರ್ಸಿಗೆ 30 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಹೊಸ ಸಂಯೋಜನೆ ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

ಶ್ರೀ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠ, ಮಂಡ್ಯ ಇವರ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಿರುವ ಎಸ್.ಬಿ.ಜಿ ಪ್ರಥಮ ದರ್ಜೆ ಕಾಲೇಜು, ಮಾಯಸಂದ್ರ, ತುರುವೇಕೆರೆ ತಾಲ್ಲೂಕು ತುಮಕೂರು ಜಿಲ್ಲೆ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.Com-80, B.Sc-PCM-40 (Physics, Chemistry, Mathematics) CBZ-40 (Chemistry, Botany, Zoology) ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಹೊಸ ಸಂಯೋಜನೆ ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.

**ಹೊಸ ಕೋರ್ಸು ನಿರ್ಣಯ:**

ತುಮಕೂರಿನ ಸೇಕ್ರೆಡ್ ಹಾರ್ಟ್ ಪ್ರಥಮ ದರ್ಜೆ ಕಾಲೇಜು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.A-HEEng (History, Economics, Optional English) ಕೋರ್ಸಿಗೆ 40 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.

ತುಮಕೂರಿನ ಸಾರಂಗ ಕಾಲೇಜ್ ಆಫ್ ಕಾಮರ್ಸ್ ಅಂಡ್ ಕಂಪ್ಯೂಟರ್ ಅಪ್ಲಿಕೇಷನ್ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.Sc-CBZ-30 (Chemistry, Botany, Zoology) ಮತ್ತು B.A-HEP (History, Economics, Political Science) ಕೋರ್ಸಿಗೆ 40 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.

ತುಮಕೂರಿನ ಏಟ್ರಿಯಾ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.C.A ಕೋರ್ಸಿಗೆ 20 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ

| | | | |
|---|---|---|---|
| | | | ಸಂಯೋಜನೆಯ ವಿಸ್ತರಣೆಯನ್ನು ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.A-HEEng (History, Economics, Optional English) ಕೋರ್ಸಿಗೆ 60 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.Sc-CBZ (Chemistry, Botany, Zoology) ಕೋರ್ಸಿಗೆ 40 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಎಸ್.ಕೆ.ಟಿ.ಡಿ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.Sc-PCM (Physics, Chemistry, Mathematics) ಕೋರ್ಸಿಗೆ 60 ಮತ್ತು B.Sc-FAD (Fashion Design and Apparel Design) ಕೋರ್ಸಿಗೆ 60 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಶ್ರೀ ಬಸವೇಶ್ವರ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.A-HPsyK (History, Psychology, Optional Kannada) ಕೋರ್ಸಿಗೆ 30 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು ಮಂಜೂರು |

| | | | |
|---|---|---|---|
| | | | ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 08 | 2020-21.ಸಾ.ವಿ.ವಿ.ಪ.01 ಕಾ.ಆ.ಪ.-04 | 2020-21ನೇ ಶೈಕ್ಷಣಿಕ ಸಾಲಿನಿಂದ ಶಾಶ್ವತ ಸಂಯೋಜನೆ ಮತ್ತು ಶಾಶ್ವತ ಸಂಯೋಜನೆ ನವೀಕರಣದ ವರದಿಗಳ ಕುರಿತು. | ತುಮಕೂರಿನ ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020-21ನೇ ಶೈಕ್ಷಣಿಕ ಸಾಲಿನಿಂದ B.Sc-CBZ ಕೋರ್ಸಿಗೆ 60 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಶಾಶ್ವತ ಸಂಯೋಜನೆ ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ತುಮಕೂರಿನ ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020-21ನೇ ಶೈಕ್ಷಣಿಕ ಸಾಲಿನಿಂದ B.A-HEP-100, PsySRd-100, JrPsyK-100, HEK-60, B.Com-100, B.Sc-PME-60, PMCs-45, PCM-45, CZMb-30, CBS-45, CZS-45 ಕೋರ್ಸುಗಳ ಮುಂದೆ ನಮೂದಿಸಿರುವ ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಶಾಶ್ವತ ಸಂಯೋಜನೆ ನವೀಕರಣ ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಪಲ್ಲಾಗಟ್ಟೆ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020-21ನೇ ಶೈಕ್ಷಣಿಕ ಸಾಲಿನಿಂದ B.A - EngEPsy-100, HEP-100, HES-100, HEK-100, HSK-100, HEPsy-100, HPG-100, B.Com-100 ಕೋರ್ಸುಗಳ ಮುಂದೆ ನಮೂದಿಸಿರುವ ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಶಾಶ್ವತ ಸಂಯೋಜನೆ ನವೀಕರಣ ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುರುವೇಕೆರೆ, ತುಮಕೂರು ಜಿಲ್ಲೆ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು |

| | | | |
|---|---|---|---|
| | | | ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2020–21ನೇ ಶೈಕ್ಷಣಿಕ ಸಾಲಿನಿಂದ B.A-HEP-100, HES-100, HEK-100, HEEng-40, B.Com-200, BBM-40, B.Sc.PCM-60, CBZ-60 ಕೋರ್ಸುಗಳ ಮುಂದೆ ನಮೂದಿಸಿರುವ ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಶಾಶ್ವತ ಸಂಯೋಜನೆ ನವೀಕರಣ ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| **ಶೈಕ್ಷಣಿಕ ವಿಭಾಗ** | | | |
| 09 | 2020–21.ಸಾ.ವಿ.ವಿ.ಪ.01 ಶೈವಿಭಾಗ–04 | ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನಡಾವಳಿಗಳ ಅನುಷ್ಠಾನದ ಕುರಿತು | ತುಮಕೂರು ವಿಶ್ವವಿದ್ಯಾನಿಲಯದ ಕಾಲೇಜು/ ವಿಶ್ವವಿದ್ಯಾನಿಲಯಗಳ ಪ್ರವೇಶಾತಿಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕಾಯ್ದಿರಿಸುವ ಕುರಿತು ನಡಾವಳಿಯ ಅನುಷ್ಠಾನದ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯ ಕುಲಪತಿಗಳು
ಕುಲಪತಿಗಳು
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು.